ದಿನಾಂಕ 19–11–2019 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

4 ಮತ್ತು 5 ನೇ ಪ್ರತಿವಾದಿಯರನ್ನು ದಾವಾ ಸರ್ವೆ ನಂಬರಿನಲ್ಲಿ 02 ಎಕರೆ ಕ್ಷೇತ್ರ ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿದ್ದೇನೆ. 4 ಮತ್ತು 5 ನೇ ಪ್ರತಿವಾದಿಯರು ದಾವಾ ಸರ್ವೆ ನಂಬರಿನಲ್ಲಿ 10 ಗುಂಟೆ ಕ್ಷೇತ್ರವನ್ನು ಖರೀದಿಸಿದ್ದಾರೆ. 4 ಮತ್ತು 5 ನೇ ಪ್ರತಿವಾದಿಯರು ಖರೀದಿಸಿ 10 ಗುಂಟೆ ಕ್ಷೇತ್ರದ ಚೆಕಬಂಧಿ ಹೇಳಲು ಬರುವುದಿಲ್ಲಾ. 4 ಮತ್ತು 5 ನೇ ಪ್ರತಿವಾದಿಯರು 10 ಗುಂಟೆ ಕ್ಷೇತ್ರವನ್ನು ಖರೀದಿಸುವಾಗ 1 ನೇ ಪ್ರತಿವಾದಿ ಮನೆತನದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದಳು ಅಂದರೆ ನಿಜ. ಆದರೆ ಆಕೆಗೆ ದಾವಾ ಸರ್ವೆ ನಂಬರಿನಲ್ಲಿ ಹಿಸ್ಸೆ ಬಂದಿರಲಿಲ್ಲ. 4 ಮತ್ತು 5 ನೇ ಪ್ರತಿವಾದಿಯರಿಗೆ 1 ನೇ ಪ್ರತಿವಾದಿಯು ಮಾರಾಟ ಮಾಡಿದ್ದಾರೆ ಅಂದ್ರೆ ಸರಿಯಲ್ಲ. ನನ್ನ ಚಿಕ್ಕಪ್ಪನ ಮಗನಾದ ಮೂಖಪ್ಪ ಎನ್ನುವವರು ಮಾರಾಟ ಮಾಡಿದ್ದಾರೆ. ದಾವಾ ಸಲ್ಲಿಸುವ ಪೂರ್ವದಲ್ಲಿ ಯಾವ ಆಸ್ತಿ ಯಾರ ಸ್ವಾಧೀನದಲ್ಲಿ ಇದೆ, ಅದರ ಚೆಕಬಂಧಿಯ ಬಗ್ಗೆ ನಾನು ಓದಿಸಿ ತಿಳಿದುಕೊಂಡಿರುವುದಿಲ್ಲಾ. ನನಗೆ ಓದು ಬರಹ ಬರುವುದಿಲ್ಲಾ. 4 ಮತ್ತು 5 ನೇ ಪ್ರತಿವಾದಿಯರು ನಿಪಿ–10 ಮತ್ತು ನಿಪಿ–11 ರ ಪ್ರಕಾರ 19 ವರ್ಷಗಳ ಹಿಂದೆ ಖರೀದಿಸಿದ್ದಾರೆ ಅಂದರೆ ನಿಜ. ಆ ಕಾಲಕ್ಕೆ 4 ಮತ್ತು 5 ನೇ ಪ್ರತಿವಾದಿಯರು ಎಲ್ಲ ದಾಖಲೆಗಳನ್ನು

ಪರಿಶೀಲನೆ ಮಾಡಿ ಖರೀದಿಸಿದ್ದಾರೆ ಅಂದರೆ ಸರಿಯಲ್ಲಾ. 4 ಮತ್ತು 5 ನೇ ಪ್ರತಿವಾದಿಯರ ಕ್ರಯ ಪತ್ರವನ್ನು ಪ್ರಶ್ನಿಸಿರುವುದಿಲ್ಲ ಅದು ಮೂಖಪ್ಪನು ಕೊಟ್ಟಿರುವುದರಿಂದ ನಾನು ನನ್ನ 26 ಗುಂಟೆಗೆ ಮಾತ್ರ ದಾವಾ ಸಲ್ಲಿಸಿದ್ದೆನೆ ನಾನು ಆಧರಿಸುವ 26 ಗುಂಟೆ ಜಮೀನಿನಲ್ಲಿ 4 ಮತ್ತು 5 ನೇ ಪ್ರತಿವಾದಿಯರ 10 ಗುಂಟೆ ಜಾಗೆ ಬರುತ್ತದೆ ಅಂದ್ರೆ ಸರಿಯಲ್ಲಾ. 4 ಮತ್ತು 5 ನೇ ಪ್ರತಿವಾದಿ ಯರು ನನ್ನ ವಹಿವಾಟಿಗೆ ತೊಂದರೆ ಮಾಡಿಲ್ಲಾ ಅಂದರೆ ನಿಜ. 4 ಮತ್ತು 5 ನೇ ಪ್ರತಿವಾದಿಯರು ಖರೀದಿಸಿದ ವಿಷಯ ನನಗೆ ಗೊತ್ತಿಲ್ಲ. ನಂತರದಲ್ಲಿ ಗೊತ್ತಾಗಿದೆ. ಖರೀದಿಗೆ ಕೊಟ್ಟ ಒಂದು ವರ್ಷದ ನಂತರ ಗೊತ್ತಾಗಿದೆ. ಫಕ್ಕೀರಪ್ಪನ ಹಿಸ್ಸೆಯಲ್ಲಿ ಮೂಖಪ್ಪ ಮಾರಾಟ ಮಾಡಿದ್ದಾನೆ ಅಂತಾ ನನಗೆ ಗೊತ್ತಾಗಿದೆ. ದಾಖಲೆ ಪ್ರಕಾರ 1 ನೇ ಪ್ರತಿವಾದಿ 4 ಮತ್ತು 5 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಅಂದ್ರೆ ಸರಿಯಲ್ಲಾ. ನನ್ನ ತಂದೆಯ ಹೆಸರಿನಲ್ಲಿ 26 ಗುಂಟೆ ಜಮೀನು ಇರುವುದಿಲ್ಲಾ ಅಂದ್ರೆ ಸರಿಯಲ್ಲಾ. ನಾನು ಹಾಜರುಪಡಿಸಿದ ಪಹಣಿ ಪತ್ರಿಕೆಗಳಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ನಮೂದಾಗಿದೆ ಅಂದರೆ ಸರಿಯಲ್ಲಾ. ಪ್ರತಿವಾದಿಯರು 15 ವರ್ಷಗಳ ಹಿಂದೆ ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ನಾನು ನ್ಯಾಯಾಲಯಕ್ಕೆ ದಾವಾ ಹಾಕಿದ್ದೆನು. ನಾನು ಸಲ್ಲಿಸಿದ ದಾವೆ ವಜಾ ಆಗಿದೆ ಅಂದ್ರೆ ಸರಿಯಲ್ಲಾ. ನಾನು ಆರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ರಿಂದ ನಾನು ಆ ದಾವೆಯ ಬಗ್ಗೆ ಕೇಳಿ ತಿಳಿದುಕೊಂಡಿಲ್ಲಾ. ಗೊತ್ತಾದ ನಂತರ ನಾನು ಈ ದಾವಾ ಸಲ್ಲಿಸಿದ್ದೇನೆ. ಪ್ರತಿವಾದಿಯರು ದಾವಾ ಆಸ್ತಿಯ ಸಾಗುವಳಿಗೆ ಯಾವುದೇ ರೀತಿಯಿಂದ ತೊಂದರೆ ಮಾಡಿಲ್ಲಾ ಅಂದ್ರೆ ಸರಿಯಲ್ಲಾ. ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲದೇ ಇದ್ದರೂ ನಾನು ಪ್ರತಿವಾದಿ ಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿದ್ದೇನೆ ಅಂದ್ರೆ ಸರಿಯಲ್ಲಾ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ  ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ